# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ತೆರಿಗೆ/ಮ.ಲೈ./ಟೆಂಡರು/ವಿವ–1/2009-10 ದಿನಾಂಕ: 08.12.2009.

## ಮಳಿಗೆಗಳ ಟೆಂಡರು–ಕಂ–ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಎಸ್.ಎಫ್.ಸಿ ಮತ್ತು ನಗರಸಭಾ ನಿಧಿ ಅನುದಾನದಲ್ಲಿ ಶಿರಸಿ ನಗರಸಭೆಯ ಸಿ.ಟಿ.ಎಸ್. ಸಂ. 1337 ರಲ್ಲಿ ಕಟ್ಟಿದ ವಾಣಿಜ್ಯ ಸಂಕೀರ್ಣದ ನೆಲ ಮಹಡಿ ಮಹಡಿಯಲ್ಲಿರುವ ಈ ಕೆಳಗಿನ 03 ಅಂಗಡಿಗಳನ್ನು ಲಿವ್ ಎಂಡ್ ಲೈಸನ್ ಫೀ ಆಧಾರದ ಮೇಲೆ 20 ವರ್ಷಗಳ ಅವಧಿಗಾಗಿ ಟೆಂಡರು–ಕಂ–ಹರಾಜು ಮೂಲಕ ವಿಲೇವಾರಿ ಮಾಡಲು ತೀರ್ಮಾನಿಸಲಾಗಿದೆ. ಮಳಿಗೆಗಳನ್ನು ಪಡೆಯಲಿಚ್ಛಿಸುವವರು ದಿನಾಂಕ: 14-12-2009 ರಿಂದ 16-01-2010ರವರೆಗೆ ಫಾರ್ಮಗಾಗಿ ಲಿಖಿತ ಅರ್ಜಿಯ ಜೊತೆಗೆ ಪೌರಾಯುಕ್ತರು, ನಗರಸಭೆ, ಶಿರಸಿರವರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ತೆಗೆದ ಮಳಿಗೆಗಳಿಗನುಸಾರವಾಗಿ ರೂ. 50,000-00 ರ ಮೌಲ್ಯದ ಡಿ.ಡಿ. ಹಾಗೂ ಫಾರ್ಮ ಫೀ ರೂ. 100-00 ಮುಖ ಬೆಲೆಯ ಡಿ.ಡಿ. ನೀಡಿ ಟೆಂಡರು ಫಾರ್ಮ ಪಡೆದು ದಿನಾಂಕ: 18-01-2010 ರಂದು ಬೆಳಿಗ್ಗೆ: 11:00 ಗಂಟೆಗೆ ನಗರಸಭೆಯ ಸಭಾ ಭವನದಲ್ಲಿ ಜರುಗಲಿರುವ ಬಹಿರಂಗ ಟೆಂಡರು–ಕಂ–ಹರಾಜು ಪ್ರಕ್ರಿಯೆಲ್ಲಿ ಭಾಗವಹಿಸಿ ವಾಣಿಜ್ಯ ಮಳಿಗೆಯ ಸ್ಟಾಲ್‌ಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ನಗರಸಭೆಗೆ ಬಂದು ಕಂದಾಯ ಅಧಿಕಾರಿಗೆ ಭೇಟಿಯಾಗಿ ತಿಳಿದುಕೊಳ್ಳಬಹುದು. ಇಲ್ಲವೆ ದೂರವಾಣಿ ಸಂಖ್ಯೆ 08384-226338ನೇದಕ್ಕೆ ಸಂಪರ್ಕಿಸಬಹುದು.

### ಅಂಗಡಿ ಮಳಿಗೆಗಳ ವಿವರ:

| ಅ.ಸಂ. | ಮಳಿಗೆಗಳ ವಿವರ (ನೆಲ ಮಹಡಿಯಲ್ಲಿಯ ಸ್ಟಾಲ್‌ಗಳು) | ಮಳಿಗೆಗಳ ಸಂಖ್ಯೆ | ಮಳಿಗೆ ಅಳತೆ (ಮೀ. ಗಳಲ್ಲಿ) | ಮರುಪಾವತಿಯಿಲ್ಲದ ಕನಿಷ್ಠ ಪ್ರಿಮೀಯಂ (ಪ್ರತಿ ಮಳಿಗೆಗೆ) | ಪ್ರತಿ ತಿಂಗಳ ಲೈಸನ್ಸ್ ಫೀ (ರೂ. ಗಳಲ್ಲಿ) ಪ್ರತಿ ಮಳಿಗೆಗೆ | ಟೆಂಡರು–ಕಂ–ಹರಾಜಿಗೆ ಕಟ್ಟ ತಕ್ಕ ಠೇವಣಿ |
|---|---|---|---|---|---|---|
| 1 | ಸಿ.ಟಿ.ಎಸ್. ಸಂ. 1337 ರಲ್ಲಿ ಹಳೆ ಮೀನು ಮಾರುಕಟ್ಟೆಯ ಹತ್ತಿರ ಕಟ್ಟಿದ ನೆಲ ಮಹಡಿ ಮಳಿಗೆ 3. | 1 | 2.75'x4.25' | 1,50,000 | 1,500 | 50,000 |
| | | 2 | 2.75'x4.25' | 1,50,000 | 1,500 | 50,000 |
| | | 3 | 12.72'x2.28' | 2,00,000 | 2,000 | 50,000 |

### *ಟೆಂಡರು ಪ್ರಕ್ರಿಯೆಯ ವೇಳಾ ಪಟ್ಟಿ:*

1. ಟೆಂಡರು ಫಾರ್ಮ ಪಡೆಯಲು ಅರ್ಜಿ ಕೊಡಲು ದಿನಾಂಕ: 14.12.2009 ರಿಂದ 16.01.2010ರವರೆಗೆ ಬೆಳಿಗ್ಗೆ: 10:30 ರಿಂದ ಸಂಜೆ: 5:30 ಗಂಟೆಯೊಳಗೆ (ರಜಾ ದಿನ ಹೊರತುಪಡಿಸಿ)
2. ಖಾಲಿ ಟೆಂಡರ್ ಫಾರ್ಮ ಕೊಡಲು ಕೊನೆಯ ದಿನಾಂಕ: 16.01.2010, ಸಂಜೆ: 5:30 ಗಂಟೆಯೊಳಗೆ.
3. ಭರ್ತಿ ಮಾಡಿದ ಟೆಂಡರ್ ಫಾರ್ಮ ಟೆಂಡರು ಪೆಟ್ಟಿಗೆಯಲ್ಲಿ ಹಾಕಲು ಕೊನೆಯ ದಿನಾಂಕ: 18.01.2010, ಬೆಳಿಗ್ಗೆ: 10:45 ಗಂಟೆಯವರೆಗೆ.
4. ಖಾಲಿ ಟೆಂಡರ್ ಫಾರ್ಮ ಬೆಲೆ ರೂ. 100-00 ಮುಖ ಬೆಲೆಯ ಪೌರಾಯುಕ್ತರು, ನಗರಸಭೆ, ಶಿರಸಿರವರ ಪದನಾಮಕ್ಕೆ ಡಿ.ಡಿ. ಸಲ್ಲಿಸುವುದು.
5. ಹರಾಜು ನಡೆಯುವ ದಿನಾಂಕ: 18.01.2010, ಬೆಳಿಗ್ಗೆ 11:00 ಘಂಟೆಗೆ, **ನಗರಸಭೆಯ ಸಭಾ ಭವನದಲ್ಲಿ**.

**ಶರತ್ತುಗಳು:–**

1. ಟೆಂಡರು ಹಾಗೂ ಬಹಿರಂಗ ಹರಾಜನ್ನು ಮರುಪಾವತಿಯಿಲ್ಲದ ಪ್ರೀಮಿಯಂ ಹಣದ ಮೇಲೆ ಮಾಡಲಾಗುವುದು.

2. ಅರ್ಜಿ ಫಾರ್ಮಿನ ಪಕ್ಕ ಪ್ರತಿಯನ್ನು (ಕೌಂಟರ್ ಫಾಯಿಲ್) ಪಡೆದವರು ಟೆಂಡರು ಹಾಗೂ ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.

3. ಅಂಗಡಿ ಕಬ್ಜಾ ಪಡೆದು ಕರಾರು ಮಾಡಿಕೊಂಡ ದಿನಾಂಕದಿಂದ ಲೈಸನ್ಸ್ ಅವಧಿಯು 20 ವರ್ಷಗಳಿಗೆ ಇರುತ್ತದೆ.

4. ತಿಂಗಳ ಲೈಸನ್ಸ್ ಫೀಯನ್ನು ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ನಗರಸಭೆಯಲ್ಲಿ ಪಾವತಿಸಿ ರಸೀದಿಯನ್ನು ಪಡೆಯತಕ್ಕದ್ದು. ಒಂದು ವೇಳೆ ಮೂರು ತಿಂಗಳವರೆಗೂ ಲೈಸನ್ಸ್ ಫೀಯನ್ನು ಪಾವತಿಸದೇ ಇದ್ದಲ್ಲಿ, ಅಂತವರ ಅಂಗಡಿಯನ್ನು ನಗರಸಭೆಯಿಂದ ಕೀಲಿ ಹಾಕಿ, ಸೀಜ್ ಮಾಡಿ, ಡಿಫಾಲ್ಟರ್ ಎಂದು ಘೋಷಿಸಿ, ಪ್ರೀಮಿಯಂ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಹರಾಜು ರದ್ದುಪಡಿಸಿ, ಹೊಸದಾಗಿ ಮರು–ಹರಾಜು ಮಾಡಲಾಗುವುದು.

5. ಪ್ರತಿ ವರ್ಷಕ್ಕೊಮ್ಮೆ ನಿಗದಿಪಡಿಸಿದ ಲೈಸನ್ಸ್ ಫೀ ಮೇಲೆ ಶೇ. 3 ರಷ್ಟು ಹೆಚ್ಚಳ ಮಾಡಲಾಗುವುದು.

6. ಯಶಸ್ವಿ ಬಿಡ್‌ದಾರರು ಹರಾಜಾದ ಪ್ರೀಮಿಯಂ ಮೊತ್ತದ ಶೇ. 10 ರಷ್ಟು ಮೊತ್ತವನ್ನು ಅದೇ ದಿವಸ ನಗರಸಭೆಗೆ ಸಂದಾಯ ಮಾಡಿ ಪಾವತಿ ಪಡೆಯತಕ್ಕದ್ದು. ಉಳಿದ ಶೇ. 90 ರಷ್ಟು ಪ್ರೀಮಿಯಂ ಹಣವನ್ನು ಟೆಂಡರು ಮಂಜೂರಾದ ನಂತರ 15 ದಿನಗಳೊಳಗಾಗಿ ಹಣವನ್ನು ನಗರಸಭೆಗೆ ಸಂದಾಯ ಮಾಡಬೇಕು. ಕಟ್ಟಡ ಕಬ್ಜಾ ಪಡೆದುಕೊಂಡು ಕರಾರು ಪತ್ರ ಮಾಡುವ ದಿನಾಂಕದಿಂದ ಲೈಸನ್ಸ್ ಫೀ ಸಂದಾಯ ಮಾಡುವುದು ಯಶ್ವಸಿ ಬಿಡ್ ದಾರರು ಜವಾಬ್ದಾರಿಯಾಗಿರುತ್ತದೆ. ಒಂದಾನು ವೇಳೆ ಯಶಸ್ವಿ ಬಿಡ್‌ದಾರರು ಬಿಡ್ಡಿನ ಪೂರ್ತಿ ರಕಂನ್ನು ತುಂಬಲು ವಿಫಲರಾದಲ್ಲಿ ಅವರು ಕಟ್ಟಿರುವ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಮಳಿಗೆಯನ್ನು ಮರು ಹರಾಜು ಮಾಡಲಾಗುವುದು.

7. ಒಂದು ಮಳಿಗೆಗೆ ಒಂದೇ ಟೆಂಡರು ಫಾರ್ಮ ನೀಡಲಾಗುವುದು ಹಾಗೂ ಪ್ರತಿ ಮಳಿಗೆಗೆ ರೂ. 50,000–00 ಠೇವಣಿ ಹಣವನ್ನು ಕಟ್ಟಿ ಟೆಂಡರು ಫಾರ್ಮ ಪಡೆದು ಮಳಿಗೆಯನ್ನು ಪಡೆಯಬಹುದು.

8. ಯಶಸ್ವಿ ಬಿಡ್‌ದಾರರು ರೂ. 200-00 ಮೌಲ್ಯದ ಛಾಪಾ ಕಾಗದದ ಮೇಲೆ ನಗರಸಭೆಯು ವಿಧಿಸಿದ ಯಾವತ್ತೂ ಶರತ್ತುಗಳನ್ನು ಪಾಲಿಸುವುದಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಕರಾರು ಬರೆದುಕೊಡತಕ್ಕದ್ದು.

9. ಯಾವುದೇ ಕಾರಣಕ್ಕೂ ಮಳಿಗೆಗಳನ್ನು ಪರಭಾರೆ ಮಾಡುವ ಅಥವಾ ಒಳಕರಾರು ಮಾಡಿಕೊಡತಕ್ಕದ್ದಲ್ಲ. ಅಂತಹ ಪ್ರಸಂಗ ಕಂಡು ಬಂದಲ್ಲಿ ಶರ್ತು ಉಲ್ಲಂಘನೆ ಆಗಿದೆಯೆಂದು ಪರಿಗಣಿಸಿ ಲೈಸನ್ಸ್‌ನ್ನು ರದ್ದುಪಡಿಸಲಾಗುವುದು. ಮತ್ತು ಪ್ರೀಮಿಯಂ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಅಂಗಡಿಯನ್ನು ನಗರಸಭೆ ತಾಬೆಗೆ ತೆಗೆದುಕೊಳ್ಳಲಾಗುವುದು. ಹಾಗೂ ಮರು–ಹರಾಜು ಪ್ರಕ್ರಿಯೆ ಜರುಗಿಸಲಾಗುವುದು.

10. ಮಂಜೂರಾದ ಮಳಿಗೆಯಲ್ಲಿ ಬಳಸಿದ ವಿದ್ಯುಚ್ಛಕ್ತಿ ಬಿಲ್, ಯಶಸ್ವಿ ಬಿಡ್‌ದಾರರು, ಸಂಬಂಧಪಟ್ಟ ಇಲಾಖೆಯ ನಿಯಮಾನುಸಾರ ಭರಿಸತಕ್ಕದ್ದು.

11. ಯಶಸ್ವಿ ಬಿಡ್‌ದಾರರು ಲೈಸನ್ಸ್ ಪಡೆದ ಮಳಿಗೆಯಲ್ಲಿ ಯಾವುದೇ ತರಹದ ಕಾನೂನು ಬಾಹಿರ ಚುಟುವಟಿಕೆಗಳನ್ನು ಮಾಡಬಾರದು. ಅದಕ್ಕೆ ಅವರ ಸ್ವಂತ ಜವಾಬ್ದಾರಿ. ಅಂತಹ ಪ್ರಕರಣ ಕಂಡುಬಂದರೆ ಯಾವುದೇ ಸೂಚನೆ ನೀಡದೆ ಮಳಿಗೆಯನ್ನು ನಗರಸಭೆ ವಶಕ್ಕೆ ಪಡೆಯಲಾಗುವುದು.

12. ಯಶಸ್ವಿ ಬಿಡ್‌ದಾರರು ಲೈಸನ್ಸ್ ಪಡೆದ ಮಳಿಗೆಯಲ್ಲಿ ಯಾವುದೇ ತರಹದ ಬದಲಾವಣೆ, ಕಟ್ಟಡದ ಪರಿವರ್ತನೆ ಮಾಡತಕ್ಕದ್ದಲ್ಲ. ಒಂದು ವೇಳೆ ಹೆಚ್ಚಿನ ವ್ಯವಸ್ಥೆ ಅವಶ್ಯವಿದ್ದಲ್ಲಿ ನಗರಸಭೆಯಿಂದ ಅನುಮತಿ ಪಡೆದು ವ್ಯವಸ್ಥೆ ಮಾಡಿಕೊಳ್ಳಬಹುದು.

13. ಯಶಸ್ವಿ ಬಿಡ್‌ದಾರರು ನಗರಸಭೆಯ ಟ್ರೇಡ್ ಲೈಸನ್ಸ್ ಕಾಯ್ದೆಯನ್ವಯ ಲೈಸನ್ಸ್ ಪಡೆದು ವ್ಯಾಪಾರ ಉದ್ಯೋಗ ಮಾಡತಕ್ಕದ್ದು.

14. ಯಶಸ್ವಿ ಬಿಡ್‌ದಾರರು ಸರ್ಕಾರ ಮತ್ತು ನಗರಸಭೆಯು ಕಾಲ–ಕಾಲಕ್ಕೆ ವಿಧಿಸಿದ ಶರ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

15. ಟೆಂಡರು ಮತ್ತು ಹರಾಜಿನ ವಿವರವಾದ ಶರತ್ತುಗಳನ್ನು ಅರ್ಜಿ ಫಾರ್ಮಿನ ಜೊತೆಗೆ ನೀಡಲಾಗುತ್ತಿದ್ದು, ಅವುಗಳನ್ನು ಟೆಂಡರುದಾರರು ಪಾಲಿಸತಕ್ಕದ್ದು.

16. ಟೆಂಡರು ಪ್ರಕ್ರಿಯೆಯಲ್ಲಿ ನಡೆದ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾದಿರಿಸಿಕೊಂಡಿದೆ.

17. ನಗರಸಭೆಗೆ ಯಾವುದೇ ತರಹದ ಬಾಕಿದಾರರಾಗಿದ್ದಲ್ಲಿ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

18. ಟೆಂಡರು-ಕಂ-ಹರಾಜಿನಲ್ಲಿ ಭಾಗವಹಿಸುವವರು ಟೆಂಡರು ಫಾರ್ಮ ಅರ್ಜಿ ಕೊಡುವಾಗ ರೂ. 50,000 ಮೌಲ್ಯದ ರಾಷ್ಟ್ರೀಕೃತ ಬ್ಯಾಂಕಿನ ಡಿ.ಡಿ. ಪೌರಾಯುಕ್ತರ ಹೆಸರಿನಲ್ಲಿ ತೆಗೆದು ಟೆಂಡರು ಫಾರ್ಮಿಗೆ ಅರ್ಜಿ ಕೊಡುವಾಗ ಸದರಿ ಡಿ.ಡಿ. ಲಗ್ತ ಇಟ್ಟು ಟೆಂಡರು ಫಾರ್ಮ ಪಡೆಯತಕ್ಕದ್ದು.

19. ಹರಾಜಿನ ದಿನದಂದು 18 ವಯಸ್ಸು ಆದವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.

20. ಯಶಸ್ವಿ ಬಿಡ್‌ದಾರರು ಬಿಡ್ಡಿನಲ್ಲಿ ಪಡೆದ ಮಳಿಗೆಗೆ ಪೂರ್ತಿ ಹಣ ಭರಣ ಮಾಡದೆ ಇದ್ದಲ್ಲಿ ಠೇವಣಿ ಹಣ ಮಟ್ಟುಗೋಲು ಹಾಕಿಕೊಳ್ಳಲಾಗುವುದು.

ಅಧ್ಯಕ್ಷರು,
ನಗರಸಭೆ, ಶಿರಸಿ.

ಪೌರಾಯುಕ್ತರು,
ನಗರಸಭೆ, ಶಿರಸಿ.